'ಅವ್ವ ನಮ್ಮ ಹಟ್ಟಿಗಿ ಗೌರವ ಅಟ್ಟ ಯಾಕ ಊರು-ಕೇರಿಗೆ ಮಾನ ಬಂದಂಗ ಆಗ್ತದ ತಾಯಿ. ನೀಯೇನ ಚಿಂತಿ ಮಾಡಬ್ಯಾಡ' ಎಂದು ರೇವಣವ್ವ ಉಂಡು ಕೈತೊಳೆದುಕೊಳ್ಳುತ್ತ ಹೇಳಿದಳು.

ಅಷ್ಟರಲ್ಲಿ ಪ್ರಕಾಶ ಊರಿಗೆ ಹೊರಡಲು ಸಿದ್ಧನಾಗಿ ಹೊರಬಂದ. ಅಂಬವ್ವ ಅವಸರ ಮಾಡಿ ಕೈತೊಳೆದುಕೊಂಡು ಬಂದು ಗಂಡ ಮಗನನ್ನು ಸೇರಿಕೊಂಡಳು. ಅಪ್ಪ-ಅವ್ವನ ಪಾದಮುಟ್ಟಿ ನಮಸ್ಕಾರ ಮಾಡಿ ಹರಕಿ ಪಡೆದ ಪ್ರಕಾಶ ಚಿಕ್ಕಜ್ಜಿಯ ಕಾಲು ಬೀಳುವುದು ಮರೆಯಲಿಲ್ಲ. ಮೂವರು ಹರಸಿ ಕೇರಿ ದಾಟಿಸಿದರು. ಬಸ್ಸು ಬರುತ್ತಿದ್ದಂತೆ ಪ್ರಕಾಶ ಹತ್ತಿದ. ಅಪ್ಪ-ಅವ್ವ ಅಜ್ಜಿಯನ್ನು ಮತ್ತೊಮ್ಮೆ ಮಗದೊಮ್ಮೆ ನೋಡಿ ಕೈ ಬೀಸಿದ. ಬಸ್ಸು ನಿಧಾನವಾಗಿ ಊರಿನಿಂದ ಮಾಯವಾಯಿತು.

ಇಂಟರ್‌ವ್ಯೂನಲ್ಲಿ ಹೇಗ ಮಾತಾಡ್ತಾನೊ! ಏನ ಕೇಳ್ತಾರೊ! ಕನ್ನಡ ಇಂಗ್ಲಿಷ್ ಓದಿದ್ದರೆ ಬೇರೆ ಮಾತು. ಉರ್ದು ಬೇರೆ ಓದ್ಯಾನ. ನನಗ ಗೊತ್ತಿರುವಂಗ ಮುಸ್ಲಿಮರ ಭಾಷೆ. ಬೇರೆ ವಿಷಯ ತಗೊಂಡು ಓದು ಎಂದು ಎಷ್ಟು ಹೇಳಿದರೂ ಮಗಾ ಕೇಳಲಿಲ್ಲ ಎಂದು ತಿಪ್ಪಣ್ಣ ಹಳಹಳಿಸಿದ. 'ಏನ ತಿಪ್ಪಣ್ಣ, ನಿನ್ನ ಮಗಾ ಅದ್ಯಾಕ ಓದ್ಯಾನ, ಅವನೇನ ತುರಕ ಆಗ್ತಾನೇನು ನೋಡು' ಎಂದು ಅಸಹ್ಯ ಪಟ್ಟವರು ಅನೇಕರು. ಆದರ ಮುಲ್ಲಾ ಮಾಸ್ತರ್ ಮಾತ್ರ, 'ತಿಪ್ಪಣ್ಣಾಜಿ ನಿಮ್ಮ ಮಗ ನಮ್ಮಕ್ಕಿಂತ ಉರ್ದು ಚೆನ್ನಾಗಿ ಓದುತ್ತಾನೆ, ಬರೆಯುತ್ತಾನೆ ಮಾತಾಡುವುದಂತೂ ಕೇಳಲಿಕ್ ಎರಡು ಕಿವಿ ಸಾಲುವುದಿಲ್ಲ. ಒಳ್ಳೆಯ ಮಗನನ್ನು ಹೆತ್ತಿದಿರಾ! ನಿಮಗೆ ಒಳ್ಳೆಯದಾಗ್ತದ ಚಿಂತಿ ಮಾಡಬ್ಯಾಡ್ರಿ, ನನ್ನ ಮಗಾನೆ ಉರ್ದು ವಿಷಯದ ಮುಖ್ಯಸ್ಥನಿದಾನೆ. ನಾನು ಅವನಿಗೂ ಹೇಳಿದ್ದೇನೆ. ಅವಂದು ಕೆಲಸಾ ಆಗ್ತದ ವಿಚಾರ ಮಾಡಬ್ಯಾಡ್ರಿ ಅಂದಾನ' ಎಂದು ಚಿಕ್ಕಮ್ಮ ರೇವಣವ್ವನ ಎದುರಿಗೆ ತಿಪ್ಪಣ್ಣ ಹೇಳಿದ.

'ಹಾಂಗಿದ್ರ ಏನೂ ಚಿಂತಿ ಮಾಡಬೇಡ ತಿಪ್ಪಣ್ಣ, ನೀ ನಂಬಿದ ನಿನ್ನ ಜೈಭೀಮ ನಿನ್ನ ಮಗನ್ನ ರಕ್ಷಣೆ ಮಾಡ್ತಾನೇಳು' ಎಂದು ಹರಸುತ್ತ ತನ್ನ ಮನೆ ಕಡೆಗೆ ಹೆಜ್ಜೆ ಹಾಕಿದಳು.

'ಚಿಕ್ಕತ್ತಿ ನಿಮ್ಮ ಬಾಯಿ ಹರಕೀಲೇ ಹೋದ ಕೆಲಸಾ ಆದ್ರ ಬಾಯಿ ತುಂಬಾ ಸಕ್ರಿ ಹಾಕಿದಲ್ಲದ, ನಿನಗೊಂದು ಇಳಕಲ್ ಸೀರಿ ತಂದ ಕೊಡತೀನಿ' ಎಂದು ಅಂಬವ್ವ ನಗುತ್ತ ಹೇಳಿದಳು.

ಪ್ರಕಾಶ ಬಸ್ಸಿನ ವೇಗ ಕಂಡು, ಇದೇನಿದು ಬಸ್ಸ್ ಇಷ್ಟು ಫಾಸ್ಟ್ ನಡದಿದೆ ಎಂದು ಒಳಗೊಳಗೆ ಆನಂದಿಸಿದ. ನಾಳೇ ನಾನು ಪ್ರೊಫೆಸರ್ ಆಗುವ ದಿನ, ಹಗಲು ರಾತ್ರಿ ದುಡಿದು ಓದಿಸಿದ ಅವ್ವ-ಅಪ್ಪ ಇಬ್ಬರಿಗೂ ಸಂಭ್ರಮದ ದಿನ ಇದಾಗ್ತದ ಎನ್ನುತ್ತಿರಬೇಕಾದರೆ, ತಂಪಾದ ಗಾಳಿಗೆ ಪ್ರಕಾಶನ ಕಣ್ಣುರೆಪ್ಪೆಗಳು ಸೋತವು. ಬಹಳ ಹೊತ್ತಾದ ಮೇಲೆ ಎದ್ದು ನೋಡುತ್ತಾನೆ ತಲುಪಬೇಕಾದ ಸ್ಥಳ ಬಹಳ ದೂರವೇನಿಲ್ಲ. ಮುಕ್ಕಾಲು ಗಂಟೆ, ಬಹಳಂದ್ರೆ ಒಂದು ಗಂಟೆ ಎಂದು ಕಂಡಕ್ಟರ್ ಹೇಳಿದ್ದು ಪ್ರಕಾಶ ಕೇಳಿಸಿಕೊಂಡ. ನನ್ನದಲ್ಲದ ವಿಷಯದಲ್ಲಿ ಪರಿಣತಿ ಪಡೆದು ಬೇರೊಂದು ಧರ್ಮದ ಸಾಹಿತ್ಯ-ಸಂಸ್ಕೃತಿ ಕುರಿತು ಪಾಠ ಬೋಧಿಸಬೇಕು. ಆ ಸಮುದಾಯದ ಜನರು ಹೇಗೆ ಸ್ವೀಕಾರ ಮಾಡಿಯಾರು! ಯಾವುದೇ ಭಾಷೆ, ಸಾಹಿತ್ಯ ಇಂಥವರದೇ ಎಂದು ಇರುವುದಿಲ್ಲ. ಜಾತ್ಯಂಧರು ಹಾಗೆ ಮಾಡಿ ಬಿಟ್ಟಿದ್ದಾರೆ. ಸಂಸ್ಕೃತ ಬ್ರಾಹ್ಮಣರದು, ಉರ್ದು ಮುಸ್ಲಿಮರದು ಎಂದು ಹಣೆಪಟ್ಟಿ ಕಟ್ಟಿದ್ದಾರ. ಭಾಷೆಗೆ ಜಾತಿ-ಧರ್ಮದ ಲೇಪನ ಮಾಡಿದ್ದಾರೆ. ಧರ್ಮಾಂಧರ ಪ್ರಕಾರ ಉರ್ದು ಭಾಷೆ ನನ್ನದಲ್ಲ. ನೌಕರಿ ಕೊಡುವ ಶಿಕ್ಷಣ ಸಂಸ್ಥೆಯೂ ನನ್ನದಲ್ಲ. ಇರಲಿ ಏನಾದರೇನಾಯಿತು. ಸಂವಿಧಾನದ ಹಕ್ಕಿನಿಂದ ಸಿಕ್ಕ ಅವಕಾಶವನ್ನು ಬಳಸಿಕೊಂಡು ಧೈರ್ಯದಿಂದ ಎದುರಿಸಿದಾಗಲೇ ಜಯಸಿಗುತ್ತದೆ. ಬಾಬಾಸಾಹೇಬರು ಮುಂಬೈನಲ್ಲಿ ಪ್ರೊಫೆಸರ್ ಆದಾಗ ವಿದ್ಯಾರ್ಥಿಗಳು ಮೊದಮೊದಲು ಪಾಠಕೇಳಲು ಬರುತ್ತಿರಲಿಲ್ಲ, ಬರಬರುತ್ತ ಅವರ ಜ್ಞಾನಕ್ಕೆ ವಿದ್ವತ್ತಿಗೆ ಮರುಳಾಗಿ ಬೇರೆ ಬೇರೆ ವಿಷಯಗಳ ವಿದ್ಯಾರ್ಥಿಗಳೂ ಸಹ ಬಂದು ಪಾಠ ಕೇಳಲಿಲ್ಲವೇ? ಶಿಕ್ಷಕ ವೃಂದದವರಿಗಾಗಿಟ್ಟದ್ದ ಮಡಿಕೆ ನೀರನ್ನು ಕುಡಿಯಲು ಬಿಡಲಿಲ್ಲ. ಅಂಥದ್ದೆಲ್ಲವನ್ನು ಆ ಕಾಲದಲ್ಲಿ ಎದುರಿಸಿ ಬದುಕಿದ ಬಾಬಾಸಾಹೇಬರು ನಮಗೆ ಮಾದರಿಯಲ್ಲವೆ? ಏನಾಗುತ್ತೊ ಆಗಲಿ ಎಂದು ಆತ್ಮಸ್ಥೈರ್ಯ ತಂದುಕೊಂಡು ಓದುವ ಹಂಬಲದಿಂದ ಇನ್ನೇನು ಪುಸ್ತಕದ ಮೇಲೆ ಕಣ್ಣಾಡಿಸಬೇಕು ಎಂದು ಪುಸ್ತಕ ಎತ್ತಿಕೊಳ್ಳುತ್ತಿದ್ದಂತೆ, 'ಇಳಿಯಿರಿ ಇಳಿಯಿರಿ' ಎಂದು ಕಂಡಕ್ಟರ್ ಹೇಳಿದ.

'ಇದೇ ಏನ್ರಿ ಸುರಪುರ' ಎಂದು ಪ್ರಕಾಶ ಕೇಳಿದ.